# UNIVERSITY COLLEGE MANGALORE
# ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು

A Constituent College of Mangalore University

*(Reaccredited by NAAC with 'A' Grade and College with Potential for Excellence)*

Office of the Principal,
U.P. Malya Road, Hampanakatta
Mangalore 575 001

ಪ್ರಾಂಶುಪಾಲರ ಕಛೇರಿ,
ಯು.ಪಿ. ಮಲ್ಯ ರಸ್ತೆ, ಹಂಪನಕಟ್ಟ
ಮಂಗಳೂರು 575 001

Email: ucmangalore1@gmail.com Phone No: 0824 2424760 website: https://universitycollegemangalore.com


ಸಂಖ್ಯೆ:ವಿವಿಕಾಮ/ಕ್ಯಾಂಟೀನ್ ಕಡತ /2026-27/ಎಸ್2 ದಿನಾಂಕ: 14.08.2026

## ಟೆಂಡರು ಪ್ರಕಟಣೆ

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಆವರಣದ ಕ್ಯಾಂಟೀನ್ ನಡೆಸುವ ಬಗ್ಗೆ.

----------

ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿನ ಆವರಣದಲ್ಲಿರುವ ಉಪಹಾರ ಕೇಂದ್ರವನ್ನು ನಡೆಸಲು ಲಗತ್ತಿಸಿದ ಪಟ್ಟಿಯಲ್ಲಿ ತಿಂಡಿತಿನಿಸುಗಳ ಮತ್ತು ಪಾನೀಯಗಳ ದರಗಳನ್ನು ನಮುದಿಸಿ, ಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು – 575001 ಇವರ ಹೆಸರಿಗೆ ಲಕೋಟೆಯ ಮೇಲೆ "ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಆವರಣದ ಕ್ಯಾಂಟೀನ್ ನಡೆಸುವ ಬಗ್ಗೆ ಟೆಂಡರ್" ಎಂದು ನಮೂದಿಸಿ ಕಳುಹಿಸಿಕೊಡತಕ್ಕದ್ದು.

**ಸೂಚನೆ:**

1. ಅ) ನಿಗದಿಯಾಗಿರುವ ಮಾಸಿಕ ಬಾಡಿಗೆ : ರೂ. 1,000.00 + 18% GST
   ಆ) ಕಾಲಾವಧಿ : ಹನ್ನೊಂದು ತಿಂಗಳು
2. ಟೆಂಡರ್ ಫಾರಂ ಬೆಲೆ : ರೂ295/- ( ರೂ .250.00 + 18% ಜಿ. ಎಸ್. ಟಿ.)
   (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ 50%)
   (ಮರುಪಾವತಿಸಲಾಗುವುದಿಲ್ಲ)

   (ಟೆಂಡರು ಫಾರಂನ ಬೆಲೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜನತಾ ಬಜಾರ್ ಮಂಗಳೂರು ಅಥವಾ ಕರ್ನಾಟಕ ಬ್ಯಾಂಕ್ ಹಂಪನಕಟ್ಟ ಶಾಖೆ, ಮಂಗಳೂರು ಚಲನ್ ಮೂಲಕ ಪಾವತಿಸುವುದು)
3. ಖಾಲಿ ಟೆಂಡರು ಫಾರಂ ವಿತರಿಸುವ ದಿನಾಂಕ : 19.08.2026
4. ಭರ್ತಿಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ : 27.08.2026
5. ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ.5,000/- ಮೊತ್ತದ ಡಿಡಿಯನ್ನು ಹಣಕಾಸು ಅಧಿಕಾರಿ ಮಂಗಳೂರು ವಿಶ್ವವಿದ್ಯಾನಿಲಯ ಇವರ ಹೆಸರಿಗೆ ಪಾವತಿಸುವುದು.(ಟೆಂಡರಿನಲ್ಲಿ ಭಾಗವಹಿಸುವವರು ಆಧಾರ್ ಕಾರ್ಡ್, ಪಾನ್ ಕಾರ್ಡ್ ಪ್ರತಿ ಲಗತ್ತಿಸತಕ್ಕದ್ದು. ಟೆಂಡರ್‌ದಾರರ ಆಯ್ಕೆಯಾದ ಬಳಿಕ ಅರ್ಜಿ ಸಲ್ಲಿಸಿದ ಉಳಿದ ಟೆಂಡರ್‌ದಾರರಿಗೆ ಠೇವಣಿಯನ್ನು ಹಿಂತಿರುಗಿಸಲಾಗುವುದು.
6. ಸ್ವೀಕೃತಿಯಾದ ದರಪಟ್ಟಿಗಳನ್ನು ದಿನಾಂಕ: 28.08.2026ರ ಪೂರ್ವಾಹ್ನ 11:00 ಗಂಟೆಗೆ ಪ್ರಾಂಶುಪಾಲರ ಕೊಠಡಿಯಲ್ಲಿ ತೆರೆಯಲಾಗುವುದು.
7. ಹೋಟೆಲ್ ಉದ್ಯಮದಲ್ಲಿ ಅನುಭವ ಹೊಂದಿರುವವರು ಹಿಂದಿನ ಕನಿಷ್ಠ 5 ವರ್ಷಗಳ ಅವಧಿಯಲ್ಲಿ ಇಂತಹ ಕೆಲಸ ಪೂರೈಸಿದ ಬಗ್ಗೆ ಸೂಕ್ತ ದಾಖಲೆಗಳನ್ನು ಅರ್ಜಿ ನೀಡುವಾಗ ಲಗತ್ತಿಸುವುದು.
8. ಅರ್ಹ ವಿದ್ಯಾರ್ಥಿಗಳಿಗೆ ಸಬ್ಸಿಡಿ ದರದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡುವುದು.
9. ಮಂಗಳೂರು ವಿಶ್ವವಿದ್ಯಾನಿಲಯದ ಅನುಮೋದನೆಯ ಬಳಿಕ ಆದೇಶ ನೀಡಲಾಗುವುದು.
10. ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ಈ ಮೇಲಿನ ಯಾವುದೇ ಷರತುಗಳನ್ನು ಉಲ್ಲಂಘಿಸಿದಲ್ಲಿ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ.
12. ಈ ವಿಚಾರದಲ್ಲಿ ಹೆಚ್ಚಿನ ಮಾಹಿತಿ/ವಿವರಣೆಗಳಿಗಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರನ್ನು ಕಛೇರಿ ವೇಳೆ ಸಂಪರ್ಕಿಸುವುದು. (ದೂರವಾಣಿ ಸಂಖ್ಯೆ: 0824-2424760)

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

ಪ್ರತಿ:

1. ಮಾನ್ಯ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
2. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ಇವರಿಗೆ, ಮಾನ್ಯ ಕುಲಪತಿಯವರ ಗಮನಕ್ಕೆ ತರಲು ಕೋರಲಾಗಿದೆ.
4. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ.